ಪ್ರ-330 (3)

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀ ಕಂಠೇಗೌಡ ಇವರು ನಿಯಮ 330ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ನೀಡುವ ಬಗ್ಗೆ.**

**ವಿಷಯ:** ಕರ್ನಾಟಕ ರಾಜ್ಯದಲ್ಲಿ ಐತಿಹಾಸಿಕ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾದಂತಹ ಏಕೈಕ ಸರ್ಕಾರಿ ಸ್ವಾಮ್ಯದ ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆಯು ಕಳೆದ ಕೆಲವು ವರ್ಷಗಳಿಂದ ಕಬ್ಬನ್ನು ಅರೆಯದೆ ಕಾರ್ಖಾನೆಯು ಸ್ಥಗಿತವಾಗಿದ್ದು, ಇದರಿಂದ ಈ ಭಾಗದ ಕಬ್ಬು ಬೆಳೆದ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಅಲ್ಲದೇ ಸರ್ಕಾರ ಇತ್ತೀಚೆಗೆ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಹೊರಟಿದೆ. ಸದರಿ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲೇ ಉಳಿಸಿಕೊಂಡು ಆರಂಭಿಸಬೇಕೆಂಬ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಬಯಸುತ್ತೇನೆ.

**ಸರ್ಕಾರದ ಉತ್ತರ:**

ಮೈಸೂರು ಸಕ್ಕರೆ ಕಂಪನಿಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದ ಸಾರ್ವಜನಿಕ ಉದ್ದಿಮೆಯಾಗಿರುತ್ತದೆ. ಮೈಸೂರು ಸಕ್ಕರೆ ಕಾರ್ಖಾನೆಯು 2015-16, 2016-17 ಹಾಗೂ 2019-20 ನೇ ಸಾಲಿನಲ್ಲಿ ದುಡಿಯುವ ಬಂಡವಾಳದ (Working Capital) ಕೊರತೆಯಿಂದಾಗಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ವಾಕೈ 05 ಸಸಕಾ 2020 ದಿನಾಂಕ 09.03.2020 ರಲ್ಲಿ ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಂಬಂಧ 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT(Lease Rehabilitate Operate Transfer) ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ (As is where is Basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದ್ದು, ಇದಕ್ಕೆ ಸಚಿವ ಸಂಪುಟದ ದಿನಾಂಕ 27.03.2020 ರ ಸಭೆಯ ಕಾರ್ಯಸೂಚಿಯ ಕ್ರಮ ಸಂಖ್ಯೆ 03 ರಲ್ಲಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿತ್ತು ಹಾಗೂ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ದಿನಾಂಕ 27.04.2020 ರಂದು ಸೇರ್ಪಡೆ ಸಹ ಆದೇಶವನ್ನು ಹೊರಡಿಸಲಾಗಿದೆ.

ತದನಂತರದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇರೆಗೆ ನೀಡುವ ಪ್ರಸ್ತಾವನೆಗೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಕಬ್ಬು ಬೆಳೆಯುತ್ತಿರುವ ರೈತರು, ಷೇರುದಾರರು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿ ಕಾರ್ಖಾನೆಯನ್ನು 2020-21 ನೇ ಹಂಗಾಮಿನಿಂದ ಓ & ಎಂ ಆಧಾರದ ಮೇಲೆ ನಡೆಸಲು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ 15.05.2020 ರಂದು ಮಂಡ್ಯ ಭಾಗದ ಜನಪ್ರತಿನಿಧಿಗಳು ಹಾಗೂ ರೈತ ಮುಖಂಡರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮರು ಮಂಡಿಸಲು ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ 2020-21 ನೇ ಹಂಗಾಮಿನಿಂದ ಓ & ಎಂ ಆಧಾರದ ಮೇಲೆ ಕಾರ್ಖಾನೆಯನ್ನು ಪ್ರಾರಂಭಿಸಲು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸಕ್ಕರೆ ಕಂಪನಿ ಇವರು ದಿನಾಂಕ:19.05.2020ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ, ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಲಾಗಿದ್ದು, ಮೈಸೂರು
ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಕುರಿತ ಸಚಿವ ಸಂಪುಟಕ್ಕೆ ಸೂಕ್ತ
ಶಿಫಾರಸ್ಸುಗಳನ್ನು ಮಾಡಲು ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ) ಇವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು
ರಚಿಸಲು ದಿನಾಂಕ: 25.06.2020ರಂದು ನಡೆದ ಸಚಿವ ಸಂಪುಟ ಸಭೆಯು
ತೀರ್ಮಾನಿಸಿರುತ್ತದೆ.

ಅದರಂತೆ ದಿನಾಂಕ: 08.07.2020 ರಂದು ನಡೆದ ಸಚಿವ ಸಂಪುಟದ ಉಪಸಮಿತಿಯ
ಸದರಿ ಕಾರ್ಖಾನೆಯನ್ನು LROT(Lease Rehabilitate Operate Transfer) ಆಧಾರದ ಮೇಲೆ
ಖಾಸಗಿಯವರಿಗೆ ಗುತ್ತಿಗೆ ನೀಡಲು ಅಥವಾ ಓ & ಎಂ ಆಧಾರದ ಮೇಲೆ
ಪುನಶ್ಚೇತನಗೊಳಿಸುವ ಸಾಧಕ ಬಾಧಕಗಳ ಕುರಿತು ಕೂಲಂಕಷವಾಗಿ ಚರ್ಚಿಸಿ, ಈ ಹಿಂದೆ
ಕಾರ್ಖಾನೆಯು ಕರೆಯಲಾಗಿದ್ದ ಓ & ಎಂ ಟೆಂಡರ್ ಡ್ಯಾಕುಮೆಂಟ್ ಅನ್ನು ಪರಾಮರ್ಶಿಸಿ
ಡಾಕ್ಯುಮೆಂಟ್‌ನ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಡಿಸಲು ಹಾಗೂ ತಾಂತ್ರಿಕ
ವರದಿಯನ್ನು ಪಡೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಸಂಬಂಧ ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕರ
ಅಧ್ಯಕ್ಷತೆಯಲ್ಲಿ ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಿ ತಾಂತ್ರಿಕ ವರದಿಯನ್ನು ಹಾಗೂ
ಮೆ|| ಮಿಟ್ಕಾನ್ ಕನ್ಸಲ್‌ಟನ್ಸಿ ಅಂಡ್ ಇಂಜಿನಿಯರಿಂಗ್ ಸರ್ವಿಸ್ ಲಿ., ಪುಣೆ ಇವರಿಂದ
ಟೆಕ್ನೋ ಎಕನಾಮಿಕ್ ಫಿಸಿಬಿಲಿಟಿ ವರದಿಯನ್ನು (Techno Economic Feasibility Report)
ಪಡೆಯಲಾಗಿತ್ತು. ಮೈಸೂರು ಸಕ್ಕರೆ ಕಾರ್ಖಾನೆಯ ಪುನಶ್ಚೇತನಗೊಳಿಸುವ ಸಂಬಂಧ
ಸದರಿ ವರದಿಗಳನ್ನು ಸಚಿವ ಸಂಪುಟ ಉಪಸಮಿತಿಯ ತೀರ್ಮಾನಕ್ಕೆ ಸಲ್ಲಿಸಲಾಗಿದ್ದು
ಮೈಸೂರು ಸಕ್ಕರೆ ಕಾರ್ಖಾನೆಯನ್ನು LROT (Lease Rehabilitate Operate Transfer)
ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡುವ ಕುರಿತು ಸಚಿವ ಸಂಪುಟದ ಮುಂದೆ
ಮಂಡಿಸಲು ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಮತ್ತು ಸಚಿವ
ಸಂಪುಟ ಉಪಸಮಿತಿಯ ಅಧ್ಯಕ್ಷರು ಸೂಚಿಸಿದ್ದರು.

ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯ
ತಾಂತ್ರಿಕ ತಜ್ಞರ ಸಮಿತಿಯು ನೀಡಿರುವ ವರದಿಯ ಶಿಫಾರಸ್ಸಿನಂತೆ ಮೈಸೂರು ಸಕ್ಕರೆ
ಕಾರ್ಖಾನೆಯನ್ನು LROT(Lease Rehabilitate Operate Transfer) ಆಧಾರದ ಮೇಲೆ
ಖಾಸಗಿಯವರಿಗೆ ಗುತ್ತಿಗೆ ನೀಡಲು ಅಥವಾ ಓ & ಎಂ ಆಧಾರದ ಮೇಲೆ
ಪುನಶ್ಚೇತನಗೊಳಿಸಲು ಸಚಿವ ಸಂಪುಟ ಸಭೆಯು ತೀರ್ಮಾನಿಸಿದಲ್ಲಿ, ಅದರಂತೆ ಕ್ರಮ
ವಹಿಸಲು ದಿನಾಂಕ: 04.11.2020ರ ಮೈಸೂರು ಸಕ್ಕರೆ ಕಂಪನಿಯ ಆಡಳಿತ ಮಂಡಳಿಯ
ಸಭೆಯಲ್ಲಿ ಅನುಮೋದನೆ ನೀಡಲಾಗಿದೆಯೆಂದು ತಿಳಿಸಿರುತ್ತಾರೆ. ಮುಂದುವರಿದು, ಓ &
ಎಂ ಆಧಾರದ ಮೇಲೆ ಪುನಶ್ಚೇತನಗೊಳಿಸಲು ರೂ.**50.00** ಕೋಟಿಗಳ ಸಾಲ ಪಡೆಯಲು
ಸರ್ಕಾರದ ಖಾತರಿಯನ್ನು ಒದಗಿಸುವಂತೆ ಅಥವಾ LROT (Lease Rehabilitate Operate
Transfer) ಆಧಾರದ ಮೇಲೆ 40 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು
ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಸಕ್ಕರೆ ಕಂಪನಿ ಇವರ ದಿನಾಂಕ:07.11.2020ರ
ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದರು.

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಈ ಕಾರ್ಖಾನೆಯನ್ನು ಆರ್ಥಿಕ ಸಂಕಷ್ಟ ಮತ್ತು ದುಡಿಯುವ ಬಂಡವಾಳದ ಕೊರತೆಯಿಂದಾಗಿ ಕಬ್ಬು ನುರಿಸುವ ಕಾರ್ಯವನ್ನು 2015-16, 2016-,17 ಹಾಗೂ 2019-20ನೇ ಹಂಗಾಮಿನಿಲ್ಲಿ ಸ್ಥಗಿತಗೊಂಡಿರುತ್ತದೆ. ಇದರಿಂದಾಗಿ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದಂತಹ ಕಬ್ಬನ್ನು ಸಕಾಲಕ್ಕೆ ನುರಿಸಲು ಸಾಧ್ಯವಾಗದೇ, ಈ ಕಬ್ಬನ್ನು ನೆರೆಯ ಸಕ್ಕರೆ ಕಾರ್ಖಾನೆಗಳಿಗೆ ಹಂಚಿಕೆ ಮಾಡಲಾಯಿತು. ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ 8.21 ಲಕ್ಷ ಮೆ.ಟನ್ ಕಬ್ಬಿನ ಲಭ್ಯತೆ ಇರುವುದಾಗಿ ಅಂದಾಜಿಸಲಾಗಿದ್ದು, ಈ ಕಬ್ಬನ್ನು ನುರಿಸುವ ವ್ಯವಸ್ಥೆ ಮಾಡಬೇಕಾಗಿತ್ತದೆ. ಪ್ರಸ್ತುತ ಕಾರ್ಖಾನೆಗೆ ಸೇರಿದ ಚರ ಮತ್ತು ಸ್ಥಿರಾಸ್ತಿಗಳ ಒಟ್ಟು ಮೌಲ್ಯ ರೂ.283.00 ಕೋಟಿಗಳಷ್ಟಿದ್ದು, ಸಾಲ ಮತ್ತು ಜವಾಬ್ದಾರಿಗಳ ಮೊತ್ತ ರೂ.103.35 ಕೋಟಿಗಳಷ್ಟಿರುತ್ತದೆ. ಕಾರ್ಖಾನೆ ಅನುಭವಿಸಿರುವ ಕ್ರೋಢೀಕೃತ ನಷ್ಟ ರೂ.529.43 ಕೋಟಿಗಳಷ್ಟಾಗಿರುತ್ತದೆ. ಈ ಕಾರ್ಖಾನೆಗೆ ಸರ್ಕಾರದಿಂದ ಈವರೆಗೆ ಒಟ್ಟು ರೂ.522.00 ಕೋಟಿಗಳಷ್ಟು ಸಾಲ/ಆರ್ಥಿಕ ನೆರವನ್ನು ನೀಡಿರುತ್ತದೆ. ಆದಾಗ್ಯೂ, ಕಾರ್ಖಾನೆಯು ಆರ್ಥಿಕವಾಗಿ ನಷ್ಟದಲ್ಲಿರುತ್ತದೆ. ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದಿರುವ ಕಬ್ಬನ್ನು ಅರೆಯಲು ಹಾಗೂ ಕಬ್ಬು ಬೆಳೆಗಾರ ರೈತರ, ಷೇರುದಾರರ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಮತ್ತು ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುವ ಅಗತ್ಯವಿದ್ದ ಹಿನ್ನೆಲೆಯಲ್ಲಿ ಸದರಿ ಕಾರ್ಖಾನೆಯನ್ನು LROT(Lease Rehabilitate Operate Transfer) ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" (As is where is Basis) 2021-22ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ: 12.11.2020ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ-542/2020ರಲ್ಲಿ ತೀರ್ಮಾನಿಸಿದ್ದು, ಅದರಂತೆ ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಟೆಂಡರ್ ಕರೆಯುವ ಸಂಬಂಧದ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಸಿಐ 05 ಸಿಓಎಫ್ 2020, ದಿನಾಂಕ:18.11.2020ರಲ್ಲಿ ಅನುಮತಿ ನೀಡಲಾಗಿದೆ.

---

ಸಿಐ 275 ಸಿಓಎಫ್ 2020

(ಅರಬೈಲ್ ಶಿವರಾಮ ಹೆಬ್ಬಾರ)
ಕಾರ್ಮಿಕ ಮತ್ತು ಸಕ್ಕರೆ ಸಚಿವರು